ವಾರದ ಪತ್ರ

## ಜವಾಬ್ದಾರಿ ಅರಿಯಲಿ

ವೀಕ್ಷಕರಿಗೆ ಮನೋರಂಜನೆಯೊಂದಿಗೆ ಜೀವನಕ್ಕೆ ಸಹಾಯವಾಗುವ ತಿಳಿವಳಿಕೆಯನ್ನೂ, ಜ್ಞಾನವನ್ನೂ ನೀಡಬೇಕಾದ್ದು ಟೀವಿಯಂತಹ ಮಾಧ್ಯಮಗಳ ಜವಾಬ್ದಾರಿ. ಆದರೆ ದುರದೃಷ್ಟವಶಾತ್ ಅವು ಹಾಗೆ ಮಾಡದೆ ಮೌಢ್ಯವನ್ನೂ ಅಜ್ಞಾನವನ್ನೂ ಹಬ್ಬಿಸುತ್ತಿವೆ.

ಧಾರಾವಾಹಿಗಳಲ್ಲಿ ತುರ್ತು ಸಂದರ್ಭಗಳನ್ನು ತೋರಿಸಿದಾಗ ಅವುಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಸರಿಯಾದ ರೀತಿಯಲ್ಲಿ ತೋರಿಸದಿರುವುದು ನಿರ್ದೇಶಕರ ಬೇಜವಾಬ್ದಾರಿತನವಾಗುತ್ತದೆ. 'ರಾಧಾ ರಮಣ'ದಲ್ಲಿನ ಧೂಳು ತುಂಬಿದ ಗಾಳಿಯಾಡದ ಕೋಣೆಯಲ್ಲಿ ಎಚ್ಚರತಪ್ಪಿ ಬಿದ್ದಿದ್ದ ಅವನಿಯ ಸುತ್ತ ಮನೆಯವರೆಲ್ಲ ನಿಂತುಕೊಂಡು 'ಎದ್ದೇಳು, ಎದ್ದೇಳು, ಕಣ್ಣು ಬಿಡು' ಎಂದು ಹೊತ್ತು ಕಳೆಯುತ್ತಾರೆ. ಅವರು ಮೊದಲು ಮಾಡಬೇಕಾಗಿದ್ದ ಕೆಲಸ, ಅವಳನ್ನು ಹೊರಗೆ ಸಾಗಿಸಿ ಶುದ್ಧಗಾಳಿಯಲ್ಲಿ ಮಲಗಿಸಿ ಪ್ರಥಮ ಚಿಕಿತ್ಸೆ ಕೊಡುವುದಾಗಿತ್ತು. ತುರ್ತು ಸಂದರ್ಭಗಳನ್ನು ನಿಭಾಯಿಸುವುದು ಹೇಗೆಂಬುವುದನ್ನು ತಿಳಿಯದೆ ತಪ್ಪಾಗಿ ತೋರಿಸುವ ನಿರ್ದೇಶಕರು ಜನರ ಸಾಮಾನ್ಯ ಜ್ಞಾನವನ್ನೂ ಅಳಿಸಿಬಿಡುತ್ತಾರೆ.

—ಜಿ.ಮೃತ್ಯುಂಜಯ, ಬೆಂಗಳೂರು

## ವಿಜ್ಞಾನ ಕ್ವಿಜ್ ಎಷ್ಟೊಂದು ಸುಂದರ

'ಥಟ್ ಅಂತ ಹೇಳಿ' ಮಕ್ಕಳು, ದೊಡ್ಡವರು ಎನ್ನದೆ ಎಲ್ಲರೂ ನೋಡಬೇಕಾದಂತಹ ಕಾರ್ಯಕ್ರಮ. ಇದರಲ್ಲಿ ಎಷ್ಟೊಂದು ಕುತೂಹಲ ಇರುತ್ತೆ ಎಂದರೆ, ಅನ್ನ ಹಳಸಲು ಕಾರಣ. ಮಜ್ಜಿಗೆ ಕಡೆಯುವುದು. ಬೆಣ್ಣೆ ಹೇಗೆ ಬರುತ್ತದೆ, ಬೇವಿನ ಮರದ ಹಾಲು ಸಿಹಿ ಏಕೆ? ಇವೆಲ್ಲ ಸಾಮಾನ್ಯವಾದದ್ದೆ. ಹಾವು ಕಂಡಾಗ ಹೆದರಿಕೆ ಏಕೆ ಬರುತ್ತೆ? ಭಯ ಬಂದಾಗ ಓಡುತ್ತೇವೆ ಏಕೆ? ಇವಕ್ಕೆಲ್ಲ ವೈಜ್ಞಾನಿಕ ಕಾರಣಗಳು ತಿಳಿಯಲು ಸಾಧ್ಯವಾಗಿದೆ.

ಅಲ್ಲದೆ ಬಹಳ ಕುತೂಹಲದ ವಿಚಾರಗಳು ಖುಷಿ ಕೊಡುತ್ತವೆ. ಇಂತಹ ಕ್ವಿಜ್ ನಡೆಸುವ ವಿಜ್ಞಾನ ಸಂಸ್ಥೆಗೂ ಚಂದನ ಟೀವಿಗೆ ಆಭಾರಿ.

—ಟಿ.ಎಂ. ಮಾನಪ್ಪ ಗೊಪಾಳ, ಶಿವಮೊಗ್ಗ

## ಕಥೆಯೂ ಒಂದಿಷ್ಟು ಬದಲಾಗಲಿ

ಕಲರ್ಸ್ ಕನ್ನಡದಲ್ಲಿ ರಾತ್ರಿ 9ಕ್ಕೆ ಪ್ರಸಾರವಾಗುತ್ತಿರುವ 'ರಾಧಾ ರಮಣ' ಎಂದೂ ಮುಗಿಯದ ಕತೆಯೇ ಆಗಿದೆ. ದಿನಕರನ ಕೊಲೆ ನಂತರ, ಅವನಿ ಮನೆಗೆ ಬರುತ್ತಾಳೆ. ಸಿತಾರಾಗೆ ಶಿಕ್ಷೆಯಾಗುತ್ತದೆ ಎಂದುಕೊಂಡವರಿಗೆ ಇದು ನಿಧಾನವಾಗಿ ಬೇರೆಯದೇ ಜಾಡು ಹಿಡಿದಿರುವುದನ್ನು ನೋಡಿ ನಿರಾಸೆ ಮೂಡಿದೆ. ಬೇರೆ ಕಡೆ ಕಲಾವಿದರು ಬದಲಾಗುವ ಅಪಾಯ ಇದ್ದರೆ, ಇದರಲ್ಲಿ ನಿರ್ದೇಶಕರೇ ಬದಲಾಗಿದ್ದಾರೆ. ಹೊಸ ನಿರ್ದೇಶಕರು ಎಲ್ಲವನ್ನೂ ಅರ್ಥಮಾಡಿಕೊಂಡು ಇದಕ್ಕೆ ತಾರ್ಕಿಕ ಅಂತ್ಯ ನೀಡುವವರೆಗೆ ನಾವು ಕಾಯ ಬೇಕಾಗಿದೆ. ಮನೆಯೊಳಗೇ ಇರುವ ದುಷ್ಟ ಶಕ್ತಿಗಳನ್ನು ಪತ್ತೆ ಹಚ್ಚಲಾಗದ ರಮಣ ಮುಂದಾದರೂ ರಾಧಾಳ ಮಾತು ಕೇಳುವಂತಾದರೆ ಸ್ವಲ್ಪ ನೋಡಲು ಯೋಗ್ಯವಾಗಿರುತ್ತದೆ.

—ಎಸ್. ಲಕ್ಷ್ಮೀ ನರಸಿಂಹ, ಚಾಮರಾಜನಗರ

## ಎತ್ತಣದಿಂದೆತ್ತ ಸಂಬಂಧವಯ್ಯ

ಮಹಿಳಾ ವಿಲನ್‌ಗಳು, ಸಾವಿರಕ್ಕೂ ಅಧಿಕ ಎಪಿಸೋಡ್‌ಗಳು, ತಿರುಳಿಲ್ಲದ ಕಥೆಗಳಿಂದ ಬೇಸತ್ತ ಮನಸ್ಸು, ಸಂಗೀತದ ರಿಯಾಲಿಟಿ ಶೋಗಳತ್ತ ತಿರುಗಿರುವುದರಲ್ಲಿ ಆಶ್ಚರ್ಯವಿಲ್ಲ. ಝೀ ಕನ್ನಡವಂತೂ ಜಾತಿಯ ಚೌಕಟ್ಟಿಲ್ಲದೆ, ಬಡವ– ಬಲ್ಲಿದರೆನ್ನದೆ, ವಿದ್ಯಾವಂತ, ಅವಿದ್ಯಾವಂತರೆನ್ನದೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಉತ್ತಮ ವೇದಿಕೆಯನ್ನು ಒದಗಿಸಿದೆ.

ಸಂಗೀತ ಕಲಿಯಬೇಕೆನ್ನುವ ಮಹದಾಸೆಗೆ ಪೂರಕವಾಗಿ ಚಾನೆಲ್‌ಗಳ ಮೂಲಕ ಪ್ರಾಯೋಜಕರು ಸಹಾಯ ಹಸ್ತ ಚಾಚಿರುವುದು ಸ್ತುತ್ಯರ್ಹ. ಆದರೆ ಅವರಿಗೆ ಪ್ರೋತ್ಸಾಹ ಕೊಡುವ ಹುಮ್ಮಸ್ಸಿನಲ್ಲಿ ಅರ್ಹ ಸ್ಪರ್ಧಿಗಳಿಗೆ ಅನ್ಯಾಯವಾಗುತ್ತಿರುವುದು ಮಾತ್ರ ವಿಷಾದದ ವಿಷಯ. ಪ್ರೋತ್ಸಾಹ ಬೇರೆ ಅರ್ಹತೆ ಬೇರೆ. ಎರಡನ್ನೂ ತಾಳೆ ಮಾಡಬಾರದು. ಪ್ರೋತ್ಸಾಹವನ್ನು ಎಲ್ಲರಿಗೂ ಕೊಡಬಹುದು. ಆದರೆ ಅಗ್ರಸ್ಥಾನವನ್ನು ಅರ್ಹ ಸ್ಪರ್ಧಿಗಳಿಗೆ ಬಿಟ್ಟು ಬೇರಾರಿಗೂ ಕೊಡಬಾರದು. ಕೇವಲ ಜನಾಭಿಪ್ರಾಯವನ್ನು (SMS) ಮುಂದಿಟ್ಟುಕೊಂಡು ತೀರ್ಪುಗಾರರು ಜನರತ್ತ ಬೆರಳು ತೋರಿಸುತ್ತಾ ಕೈಚೆಲ್ಲಿ ಕುಳಿತು ಬಿಡುತ್ತಾರೆ. ಕಾರ್ಯಕ್ರಮ ಶುರುವಾದಾಗಲಿನಿಂದ ಅವರ ಸಹಭಾಗಿತ್ವವನ್ನು ಗಮನಿಸಬೇಕೇ ಹೊರತು ಕೇವಲ ಒಂದು ದಿನದಲ್ಲಿ ಅಲ್ಲ. ಹಾಗಾದರೆ ಅಷ್ಟು ದಿನಗಳ ಕಾಲ ಕಾರ್ಯಕ್ರಮ ನಡೆಸಿಕೊಡುವ ಅವಶ್ಯಕತೆಯಾದರೂ ಏಕಿತ್ತು. ಕೇವಲ ಒಂದೇ ದಿನದಲ್ಲಿ ಪ್ರಥಮ ಸ್ಥಾನವನ್ನು ಘೋಷಿಸಬಹುದಿತ್ತಲ್ಲವೇ?

—ಪುಷ್ಪಾ ಎನ್.ಕೆ. ರಾವ್ ಉಡುಪಿ

## ಸಿದ್ಧಾರ್ಥನ ಅಪಹರಣ ರಹಸ್ಯ

ಕಲರ್ಸ್‌ನ 'ಅಗ್ನಿಸಾಕ್ಷಿ' ನಾಯಕನಟ ಸಿದ್ಧಾರ್ಥನ ಅಪಹರಣವಾಗಿದೆ. ಕಥೆಯ ಈ ಅನಿರೀಕ್ಷಿತ ತಿರುವು ಕುತೂಹಲ ಮೂಡಿಸಿದೆ. ಕಳೆದ ತಿಂಗಳಷ್ಟೇ ನಿಜಜೀವನದಲ್ಲಿ ವೈವಾಹಿಕ ಬದುಕಿಗೆ ಕಾಲಿಟ್ಟ ಸಿದ್ಧಾರ್ಥ ಪಾತ್ರಧಾರಿಗೆ (ವಿಜಯ್ ಸೂರ್ಯ) ಬಿಡುವು ನೀಡುವ ಸಲುವಾಗಿಯೇ ಕಥೆಯಲ್ಲಿ ಅಪಹರಣದ ಸನ್ನಿವೇಶ ಸೃಷ್ಟಿಸಲಾಗಿದೆ ಎಂಬ ಅನುಮಾನ ಕಾಡುತ್ತಿದೆ. ಅಡುಗೆ ಮನೆಯಲ್ಲಿ ಬೆರಳಿಗೆ ಚಿಕ್ಕ ಗಾಯವಾದರೂ ಎರಡು ದಿನ ಆರೈಕೆ ಮಾಡಿ ಕಾಳಜಿ ವಹಿಸುವ ಸಿದ್ಧಾರ್ಥನ ಮನೆಯವರು ಅವನ ಕಣ್ಮರೆ ಪ್ರಸಂಗವನ್ನು ಹೆಚ್ಚೂ ಕಡಿಮೆ ನಿರ್ಲಕ್ಷಿಸಿರುವುದೂ ಇದಕ್ಕೆ ಪುಷ್ಟಿ ನೀಡುತ್ತದೆ.

—ಮಧು ವಿ. ಸಾಗರ

## ಮುಜುಗರ ತಪ್ಪಿಸಿ

ಝೀ ಕನ್ನಡದ 'ಸುಬ್ಬಲಕ್ಷ್ಮಿ' ಸಂಸಾರದಲ್ಲಿ ಅರ್ಧ ಗಂಟೆ ಕಾಲ ಕುಡಿಯುವ ದೃಶ್ಯ ಬಿತ್ತರವಾಗಿದೆ. ಸಮಸ್ಯೆಗಳಿಗೆ ಕುಡಿಯುವುದೊಂದೇ ಪರಿಹಾರ ಎಂಬುವುದನ್ನು ಸಾಬೀತುಪಡಿಸಲು ಹೊರಟಂತಿದೆ.

ಮನೆಮಂದಿಗೆಲ್ಲ ಮುಜುಗರ ತರುವ ಇಂತಹ ದೃಶ್ಯಗಳು ಈ ಧಾರಾವಾಹಿಯಲ್ಲಿ ಪದೇ ಪದೇ ಬಿತ್ತರವಾಗುತ್ತಿವೆ. ದಯವಿಟ್ಟು ಮದ್ಯಪಾನ ಮಾಡುವ ದೃಶ್ಯಗಳ ಬಿತ್ತರಿಸಬೇಡಿ.

—ಪ. ಚಂದ್ರಕುಮಾರ ಗೌನಹಳ್ಳಿ

## ಸುಳ್ಳು ಜಾಹೀರಾತು ಸಲ್ಲ

ಬಹುತೇಕ ಎಲ್ಲಾ ಟೀವಿ ವಾಹಿನಿಗಳಲ್ಲಿ ಸುಳ್ಳು ಜಾಹೀರಾತುಗಳನ್ನು ಪ್ರಸಾರ ಮಾಡಲಾಗುತ್ತದೆ. ಮಾಟ–ಮಂತ್ರ, ಯಂತ್ರ– ತಂತ್ರಗಳು ಅದರ ಸತ್ಯ– ಅಸತ್ಯಗಳು ಯಾರಿಗೂ ಗೊತ್ತಿಲ್ಲ. ಆದರೆ ನಿಜ ಎನ್ನುವಂತೆ, ವಿಶ್ವಾಸಾರ್ಹ ಎನ್ನುವಂತೆ ಚಿತ್ರೀಕರಿಸಲಾಗುತ್ತದೆ. ಜಾಹೀರಾತಿನ ಮೋಡಿಗೆ ಅನೇಕರು ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡಿದ್ದಾರೆ. ಇದು ಅಕ್ಷಮ್ಯ ಅಪರಾಧ. ದುರಾಸೆಯ ಬಲೆಗೆ ಬಿದ್ದು ಸುಳ್ಳು ಜಾಹೀರಾತುಗಳನ್ನು ಪ್ರಸಾರ ಮಾಡಬಾರದು ಎನ್ನುವುದು ನನ್ನ ಕೋರಿಕೆ.

—ಎಂ. ಸುಬ್ಬಣ್ಣ ಬೆಂಗಳೂರು

## ಕೌಟುಂಬಿಕ ಧಾರಾವಾಹಿ ಎಲ್ಲಿ?

ಕನ್ನಡ ವಾಹಿನಿಗಳಲ್ಲಿ ಧಾರಾವಾಹಿಗಳ ಮಹಾಪೂರವೇ ಹರಿಯುತ್ತಿದೆ. ಆದರೆ ಇತ್ತೀಚೆಗೆ ಕೌಟುಂಬಿಕ ಧಾರಾವಾಹಿಗಳು ಕಾಣದಾಗಿದೆ. ಹಲವಾರು ವರ್ಷಗಳ ಹಿಂದೆ ಅತ್ಯಂತ ಜನಪ್ರಿಯವಾಗಿ ಪ್ರಸಾರವಾಗುತ್ತಿದ್ದ ಧಾರಾವಾಹಿ 'ಮೂಡಲಮನೆ' ಮನೆ ಮನಗಳಲ್ಲಿ ಸಂಸತ ಉಂಟುಮಾಡುತ್ತಿತ್ತು. ಮತ್ತೊಮ್ಮೆ ಮರುಪ್ರಸಾರ ಮಾಡಬೇಕೆಂದು ಕೋರಿಕೆ. ಅದರಂತೆ ಹಾಸ್ಯ ಪ್ರಧಾನವಾಗಿದ್ದ 'ಸಿಲ್ಲಿ ಲಲ್ಲಿ' ಮರುಪ್ರಸಾರವಾದರೆ ಇದರಿಂದ ರಾತ್ರಿ ಮನಸ್ಸಿಗೆ ನೆಮ್ಮದಿ, ಸುಖ ಎನಿಸುತ್ತದೆ.

—ಎಂ.ಬಿ. ರಂಗಪ್ಪ ಶೆಟ್ಟಿ ಮೋಕಾ